|| ಶ್ರೀಮದ್ವಾದಿರಾಜಗುರ್ವಂತರ್ಗತ ಶ್ರೀಮದ್ವೇಶಾಯನಮಃ ||

|| ಅಣು ಮಧ್ವಚರಿತಮ್ ||

ದ್ವಾಪರೇ ಭೀಮಸೇನೇನ ಹತೇಷು ಸುರಶತ್ರುಷು ||
ಮಣಿಮಾನವನೌ ಜಾತೋ ಯತಿರೂಪಃ ಕಲೌ ಯುಗೇ |
ಮಾಯಾಮತಂ ವಿನಿರ್ಮಾಯ ತತಃ ಸರ್ವಾನಮೋಹಯತ್ || 1 ||

*ದ್ವಾಪರಯುಗದಲ್ಲಿ ದೇವಶತ್ರುಗಳಾದ ಕ್ರೋಧವಶರೆಂಬ ದೈತ್ಯರು ಭೀಮನಿಂದ ಹತರಾದರು. ಅವರಲ್ಲಿ ಪ್ರಧಾನನಾದ ಮಣಿಮಂತನೆಂಬವನು ಕಲಿಯುಗದಲ್ಲಿ ಮತ್ತೆ ಯತುರೂಪ ತೊಟ್ಟು ಹುಟ್ಟಿದನು. ಅನಂತರ ಮಾಯಾವಾದವನ್ನು ಪ್ರಚುರಮಾಡಿ ಎಲ್ಲರನ್ನು ಮೋಹಗೊಳಿಸಿದನು.*

ತದಾऽऽಜ್ಞಪ್ತೋ ಭಗವತಾ ವಾಯುಃ ಸಂಪ್ರಾರ್ಥಿತಃ ಸುರೈಃ |
ತ್ರಿಶತಾಬ್ದೋತ್ತರಚತುಃಸಹಸ್ರಾಬ್ದೇಭ್ಯ ಉತ್ತರೇ || 2 ||
ಏಕೋನಚತ್ವಾರಿಂಶಾಬ್ದೇ ವಿಲಂಬಿಪರಿವತ್ಸರೇ |
ಆಶ್ವೀನಶುಕ್ಲದಶಮೀದಿವಸೇ ಭುವಿ ಪಾವನೇ || 3 ||
ಪಾಜಕಾಖ್ಯೇ ಶುಚಿಕ್ಷೇತ್ರೇ ದುರ್ಗಯಾ ಚಾಭಿವೀಕ್ಷಿತೇ |
ಜಾತೋ ಮಧ್ಯಾಹ್ನವೇಲಾಯಾಂ ಬುಧವಾರೇ ಮರುತ್ತನುಃ || 4 ||

*ಆಗ ಭಗವಂತ ವಾಯುದೇವರನ್ನು ಭೂಮಿಯಲ್ಲಿ ಅವತರಿಸುವಂತೆ ಆಜ್ಞಾಪಿಸಿದನು; ದೇವತೆಗಳು ಪ್ರರ್ಥಿಸಿಕೊಂಡರು. ಕಲಿಯುಗ ಪ್ರಾರಂಭವಾಗಿ 4336ವರ್ಷಗಳು ಸಂದಿದ್ದವು. ವಿಲಂಬಿ ಸಂವತ್ಸರದ ಆಶ್ವಯುಜ ಮಾಸ; ಶುಕ್ಲ ಪಕ್ಷ; ದಶಮೀ ತಿಥಿ; ಸೋಮವಾರ. ಇಂಥ ಶುಭ ದಿನದಲ್ಲಿ ಮಧ್ಯಾಹ್ನದ ಹೊತ್ತು, ಮುಖ್ಯಪ್ರಾಣನು*

*ದುರ್ಗೆಯ ದೃಷ್ಟಿಯಿಂದ ಪಾವನವಾದ ಪುಣ್ಯಕ್ಷೇತ್ರ ಪಾಜಕದಲ್ಲಿ ಅವತರಿಸಿದರು.*

ಭೂಸುರೇಂದ್ರೋಪನೀತೋ ಯಸ್ತತ ಏಕಾದಶಾಬ್ದಕೇ ।
ಸೌಮ್ಯೇ ಜಗ್ರಾಹ ಭಗವಾಂಸ್ತುರೀಯಾಶ್ರಮಮುತ್ತಮ್ ॥ 5 ॥

*ನಡಿಲ್ಲಾಯ ಭಟ್ಟರು ಗರ್ಭಾಷ್ಟಮದಲ್ಲೆ ಮಗನಿಗೆ ಉಪನಯನ ಮಾಡಿದರು. ಭಗವಾನ್ ವಾಯುದೇವ ತನ್ನ ಹನ್ನೊಂದನೆಯ ವಯಸ್ಸಿನಲ್ಲೆ, ಸೌಮ್ಯ ಸಂವತ್ಸರದಲ್ಲಿ, ಸನ್ಯಾಸವನ್ನು ಸ್ವೀಕರಿಸಿದನು.*

ತತಃ ಸಮಾಸೇ ದಶಕೇ ದಿವಸಾನಾಂ ಗತೇ ಪರಾನ್ ।
ಮಧ್ವನಾಮಾ ಜಿಗಾಯಾಯಂ ವಾದಿನೋ ವಾದಕೌಶಲೀ ॥ 6 ॥

*ಆಶ್ರಮ ಪಡೆದು ನಾಲ್ವತ್ತೇ ದಿನಗಳಲ್ಲಿ ವಾದಕುಶಲರಾದ ಮಧ್ವಮುನಿ ವಾದಕ್ಕೆಂದು ಬಂದ (ವಾಸುದೇವ ಪಂಡಿತ ಮುಂತಾದ) ಎಲ್ಲ ದುರ್ವಾದಿಗಳನ್ನು ಗೆದ್ದು ಜಯಶೀಲರಾದರು.*

ಗೀತಾಭಾಷ್ಯಂ ವಿಧಾಯಾऽದೌ ದೃಷ್ಟ್ವಾ ಚ ಬದರೀತಟೇ ।
ವೇದವ್ಯಾಸಸ್ಯ ಚಾऽದೇಶಾತ್ ಸೂತ್ರಭಾಷ್ಯಮಥಾಕರೋತ್ ॥ 7 ॥

*ಮೊದಲು ಶ್ರೀಭಗವದ್‌ಗೀತೆಗೆ ಭಾಷ್ಯವನ್ನು ಬರೆದು, ಬದರಿಗೆ ತೆರಳಿ, ಅಲ್ಲಿ ವೇದವ್ಯಾಸರನ್ನು ಕಂಡು ಅವರಿಗೆ ಭಾಷ್ಯವನ್ನು ಸಮರ್ಪಿಸಿದರು. ಆನಂತರ ಬಾದರಾಯಣಭಗವಾನರ ಆದೇಶದಂತೆಯೆ ಬ್ರಹ್ಮಸೂತ್ರಗಳಿಗೂ ಭಾಷ್ಯ ಬರೆದರು.*

ಪುನರ್ಗತ್ವಾ ಚ ಬದರೀಂ ವ್ಯಾಸಮಾನಮ್ಯ ಪೂರ್ಣಧೀಃ ।

ಭಾಷ್ಯಾದಿಸೇವಾಂ ವಿಜ್ಞಾಪ್ಯ ರೂಪ್ಯಪೀಠಮಿದಂ ಪುನಃ ॥ 8 ॥
ಆಗತ್ಯ ಭಾರತಸ್ಯಾಥ ತಾತ್ಪರ್ಯಂ ಕರ್ಮನಿರ್ಣಯಮ್ ।
ಕೃತ್ವಾ ಚ ಚತುರೋ ಮಾಸಾನುಷಿತ್ವಾ ಕಣ್ವತೀರ್ಥಕೇ ॥ 9 ॥
ಏಕೋನಾಶೀತಿವರ್ಷಾಣಿ ನೀತ್ವಾ ಮಾನುಷದೃಷ್ಟಿಗಃ ।
ಪಿಂಗಲಾಬ್ಧೇ ಮಾಘಶುದ್ಧನವಮ್ಯಾಂ ಬದರೀಂ ಯಯೌ ॥ 10 ॥

*ಎರಡನೆಯ ಬಾರಿ ಮತ್ತೊಮ್ಮೆ ಬದರಿಗೆ ತೆರಳಿದರು. ಅಲ್ಲಿ ಭಗವಾನ್ ಶ್ರೀವೇದವ್ಯಾಸರನ್ನು ಕಂಡು ಎರಗಿ, ತಾವು ಭಾಷ್ಯ ಮುಂತಾದ ಗ್ರಂಥಗಳನ್ನು ಅವರ ಬಳಿ ನಿವೇದಿಸಿಕೊಂಡರು. ಆನಂತರ ಉಡುಪಿಗೆ ಮರಳಿ ಬಂದರು. ಇಲ್ಲಿಗೆ ಬಂದ ಮೇಲೆ ಭಾರತ ತಾತ್ಪರ್ಯನಿರ್ಣಯ ಮತ್ತು ಕರ್ಮನಿರ್ಣಯ ಇಂಥ ಗ್ರಂಥಗಳನ್ನು ಬರೆದರು. ಆನಂತರ ತಮ್ಮ ಕೊನೆಯ ಚಾತುರ್ಮಾಸ್ಯವನ್ನು ಕಣ್ವತೀರ್ಥದಲ್ಲಿ ಕಳೆದರು. ಹೀಗೆ ಮನುಷ್ಯರ ದೃಷ್ಟಿಗೆ ಗೋಚರರಾಗಿ 79 ವರ್ಷಗಳ ಕಾಲ ಈ ಭೂಮಿಯಲ್ಲಿದ್ದರು. ಕೊನೆಗೆ ಪಿಂಗಲ ಸಂವತ್ಸರದ ಮಾಘ ಶುದ್ಧ ನವಮಿಯಂದು ಬದರಿಗೆ ತೆರಳಿ ಅದೃಶ್ಯರಾದರು.*

**॥ ಇತಿ ಅಣುಮಧ್ವಚರಿತಂ ಸಂಪೂರ್ಣಮ್ ॥**

॥ ಶ್ರೀಮದ್ವಾದಿರಾಜಗುರ್ವಂತರ್ಗತ ಶ್ರೀಮದ್ವೇಶಾರ್ಪಣಮಸ್ತು ॥

★ ಈ ಗ್ರಂಥವನ್ನು ಬರೆದವರು ಯಾರು ಎನ್ನುವುದು ಸ್ಪಷ್ಟವಾಗಿ ತಿಳಿದು ಬಂದಿಲ್ಲ ಶ್ರೀಹೃಷೀಕೇಶತೀರ್ಥರೇ ಇದನ್ನು ಬರೆದಿರಬೇಕೆಂದು ಊಹಿಸಲಾಗಿದೆ.